ಬ್ರಾಡ್‌ವೇ ಮತ್ತು ಕಮರ್ಶಿಯಲ್ ಸ್ಟ್ರೀಟ್ ಪೋಲೀಸ್ ಸ್ಟೇಷನ್‌ನಲ್ಲಿ ಬಹಳ ಹೆಚ್ಚು ಬೆಲೆ ಬರುವ ಜಾಗ ಇದೆ. ಅಲ್ಲಿ ಇವತ್ತು ಹೋಟೆಲು ಮುಂತಾದ ಮಲ್ಟಿಪರ್‌ಪಸ್ ಉಪಯೋಗವಾಗುವ ಕಟ್ಟಡವನ್ನು ಕಟ್ಟಬಹುದು. ಇವತ್ತು ಅಲ್ಲಿ ಮಲ್ಟಿಪರ್‌ಪಸ್ ಸ್ಕೀಮ್ ಮಾಡಿ ಹಣ ಖರ್ಚು ಮಾಡಿ ಕಟ್ಟಿಡ ಕಟ್ಟಿದರೆ ತಾನಾಗಿಯೇ ಫಂಡ್ಸ್ ಜನರೇಟ್ ಮಾಡುವ ಕಾಂಪ್ಲೆಕ್ಸ್ ಮಾಡುವುದಕ್ಕೆ ಅನುಕೂಲ ಇದೆ. ಅದನ್ನು ತೀವ್ರವಾಗಿ ಯೋಜನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಬಹಳ ಗಂಭೀರವಾಗಿ ಆಲೋಚನೆ ಮಾಡಿ ನಮ್ಮ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಸುಮಾರು 7 ಲಕ್ಷ ರೂಪಾಯಿ ಕೆಲಸವನ್ನು ಮಾಡಿಸುತ್ತಿದ್ದೇವೆ. ಸುಮಾರು 29 ಲಕ್ಷ ರೂಪಾಯಿಗೆ ಎಲ್ಲಾ ಎಸ್ಟಿಮೇಟ್ ಮಾಡಿಸಿದ್ದೇವೆ. ಅಷ್ಟು ಹಣ ಬೇಕಾಗುತ್ತದೆ. ಆ ಕೆಲಸವನ್ನು ತೀವ್ರಗತಿಯಲ್ಲಿ ಈ ವರ್ಷ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. Subject to availability of funds. ಎಂದು ಹೇಳಿದ್ದೇನೆ. ಆದರೂ ಈ 29 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಎಲ್ಲಾ ಕೂಡ ರಿಪೇರಿಯಾಗುತ್ತದೆ. ಆ ಕೆಲಸವನ್ನು ಮಾಡುವುದಕ್ಕೆ ನಾನು ಒಪ್ಪಿಗೆ ಕೊಟ್ಟಿದ್ದೇನೆ. ಮತ್ತೆ ಲಾಕಪ್ ವಿಷಯ ಹೇಳಿದ್ದಾರೆ. ಆಮೇಲೆ ಪೋಲೀಸ್ ಸ್ಟೇಷನ್ ಇರುವ ಜಾಗದಲ್ಲಿ ಮಲ್ಟಿಪರ್‌ಪಸ್ ಬಿಲ್ಡಿಂಗ್ ಕಟ್ಟಿದರೆ ಅದರಿಂದ ಬಾಡಿಗೆ ಬರುತ್ತದೆ ಫಂಡ್ಸ್ ಜನರೇಟ್ ಆಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಕೂಡ ತ್ವರಿತವಾಗಿ ಪರಿಶೀಲಿಸಿ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಮಲಖೇಡ ರಬ್ಬನಪಲ್ಲಿ ಮತ್ತಿತರ ರಸ್ತೆಗಳ ದುರಸ್ತಿಗೆ ಖರ್ಚಾದ ಹಣ.

(274)ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ):- ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿವರೆ.

ಅ ಮಲಖೇಡ ರಬ್ಬನಪಲ್ಲಿ, ಮಲಖೇಡ ರಾಜಶ್ರೀ ಸಿಮೆಂಟ್ ಕ್ರಾಸ್‌ವರೆಗೆ ಹಾಗೂ ಸೇಡಂ ಕೊಡ್ಲಾ ಹಂದ್ರಿಕವರೆಗೆ 90-91, 91-92 ನೇ ಸಾಲಿನ ಜನವರಿ ತಿಂಗಳವರೆಗೆ ರಸ್ತೆ ದುರಸ್ತಿಗೆ ಆಗಿರುವ ಖರ್ಚು ಎಷ್ಟು .

ಆ ಹಣ ಖರ್ಚು ಮಾಡಿದರೂ ಸಹ ದೊಡ್ಡ ತಗ್ಗುಗಳು ಇದ್ದು, ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಲು ಕಾರಣವೇನು.

ಇ ಹಣ ಖರ್ಚು ಆದರೂ ಸಹ ಕೆಲಸ ಸರಿಯಾಗಿ ನಡೆಯದಿರುವ ಬಗ್ಗೆ ಮೇಲಾಧಿಕಾರಿಗಳಿಂದ ವಿಚಾರಣೆಮಾಡಿಸಲಾಗುವುದೆ, ಮತ್ತು ಇವರ ಮೇಲೆ ಕ್ರಮ ಯಾವಾಗ ಕೈಗೊಳ್ಳಲಾಗುವುದು.

ಈ ಈ ರಸ್ತೆಗಳ ದುರಸ್ತಿಗಾಗಿ ಟೆಂಡರ್ ಕೆಲಸಗಳನ್ನು ಗುತ್ತಿಗೆದಾರರು ಪೂರ್ತಿ ಮಾಡುವ 1-2 ವರ್ಷಗಳವರೆಗೆ ಇವುಗಳ ದುರಸ್ತಿ ಮಾಡಿ ಸಂಚಾರಕ್ಕೆ ಅನುಕೂಲ ಮಾಡಿ ಕೊಡಲಾಗುವುದೆ.

ಉ ಈ ರಸ್ತೆಗಳನ್ನು ಯಾವಾಗ ದುರಸ್ತಿ ಮಾಡಲಾಗುವುದು ಹಾಗೂ ಒಂದು ವೇಳೆ 90-91ನೇ ಸಾಲಿನಲ್ಲಿ ಸುಳ್ಳು ಖರ್ಚು ತೋರಿಸಿದಂತೆ ಆದರೆ ಇದರಿಂದ ಸಂಚಾರಕ್ಕೆ ಉಪಯೋಗವೇನು.

ಊ ಇದನ್ನು ತಡೆಗಟ್ಟಲು 90-91ನೇ ಸಾಲಿನ ಹಣ ಸತ್ಯಕ್ಕೆ ದೂರವಾದ ಖರ್ಚನ್ನು ಸರ್ಕಾರದವರು ಸಿ.ಓ.ಡಿ.ಯಿಂದ ತನಿಖೆ ಮಾಡಿಸುವುದೆ ?

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ 1990-91ನೇ ಸಾಲಿನಿಂದ 91-92ರ ಫೆಬ್ರವರಿ 92ರ ವರೆಗೆ ಈ ರಸ್ತೆಗಳ ದುರಸ್ತಿಗೆ ಆಗಿರುವ ವೆಚ್ಚ 21.23 ಲಕ್ಷ ರೂ.ಗಳು.

ಆ ಈ ರಸ್ತೆಗಳಲ್ಲಿ ವಾಹನ ಸಂಚಾರವು ಅಧಿಕವಾಗಿದ್ದೂ ಹಾಗೂ ಈ ರಸ್ತೆಗಳ ನಿರ್ಮಾಣವಾಗಿ ಸುಮಾರು 30 ವರ್ಷಗಳಾಗಿದ್ದೂ, ತಳಪಾಯವು ಈಗಿನ ವಾಹನ ಸಂಚಾರ ಸಾಂದ್ರತೆಯನ್ನು ತಡೆದುಕೊಳ್ಳುವ ಶಕ್ತಿ ಇಲ್ಲ. ಆದ್ದರಿಂದ ಈ ರಸ್ತೆಗಳು ಬೇಗ ಕೆಡುತ್ತವೆ.

ಇ ಈ ರಸ್ತೆಗಳನ್ನು ಲಭ್ಯವಿರುವ ನಿರ್ವಹಣಾ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ. ಕೆಲಸಗಳನ್ನು ಸರಿಯಾಗಿ ಮಾಡಿಲ್ಲವೆಂಬ ಮಾನ್ಯ ಸದಸ್ಯರ ಅಭಿಪ್ರಾಯದ ಬಗ್ಗೆ ಮುಖ್ಯ ಇಂಜಿನಿಯರ್‌ರವರನ್ನು ಈ ವಿಷಯದ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡುವಂತೆ ಸೂಚಿಸಲಾಗುವುದು.

ಈ ಈ ರಸ್ತೆಗಳ ಪೈಕಿ ಮಲಖೇಡ -ರಬ್ಬನ್‌ಪಲ್ಲಿ ಮತ್ತು ಸೇಡಂ ಕೋಡ್ಲಾ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಿದ್ದಾರೆ. ಮಲಖೇಡ - ರಾಜಶ್ರೀ ಸಿಮೆಂಟ್ ಕ್ಯಾಸ್‌ನವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರ ಪ್ರಾರಂಭ ಮಾಡುವಂತೆ ಗುತ್ತಿಗೆದಾರರಿಗೆ ನೋಟೀಸ್ ನೀಡಲಾಗಿದೆ. ರಸ್ತೆ ಕಾಮಗಾರಿ ಮುಗಿಯುವವರೆವಿಗೂ ರಸ್ತೆಯನ್ನು ನಿರ್ವಹಣೆ ಮಾಡಿ ವಾಹನ ಸಂಚಾರಕ್ಕೆ ತೊಂದರೆ ಉಂಟಾಗದಂತೆ ನೋಡಿಕೊಳ್ಳಲಾಗುವುದು.

ಉ ಈ ರಸ್ತೆಗಳ ನಿರ್ವಹಣೆಯನ್ನು ಲಭ್ಯವಿರುವ ಅನುದಾನದಿಂದ ಆದಷ್ಟು ಸುಸ್ಥಿತಿಯಲ್ಲಿಡಲಾಗುವುದು. 90-91ನೇ ಸಾಲಿನಲ್ಲಿ ಸುಳ್ಳು ಖರ್ಚು ತೋರಿಸಲಾಗಿದೆ ಎಂಬ ಮಾನ್ಯ ಸದಸ್ಯರ ಅಭಿಪ್ರಾಯದ ಬಗ್ಗೆ ಮುಖ್ಯ ಇಂಜಿನಿಯರ್‌ರವರನ್ನು ವಿವರವಾಗಿ ತನಿಖೆ ಮಾಡುವಂತೆ ಸೂಚಿಸಲಾಗುವುದು.

ಊ ಈ ಬಗ್ಗೆ ಮುಖ್ಯ ಇಂಜಿನಿಯರ್ ರವರಿಂದ ತನಿಖಾ ವರದಿ ಬಂದ ನಂತರ ನಿರ್ಣಯಿಸಲಾಗುವುದು.

ಶ್ರೀ ಬಸವಂತ ರೆಡ್ಡಿ ಪೋತಕಪಲ್ಲಿ :- ಮಾನ್ಯ ಅಧ್ಯಕ್ಷರೆ, ಮಲಖೇಡ ರಬ್ಬನಪಲ್ಲಿ, ಮಲಖೇಡ ರಾಜಶ್ರೀ ಸಿಮೆಂಟ್ ಕ್ಯಾಸ್‌ವರೆಗೆ ಹಾಗೂ ಸೇಡಂ ಕೊಡ್ಲಾ ಹಂದ್ರಿ ಕಿವರೆಗೆ 1990-91, 1991-92ನೇ ಸಾಲಿನ ಜನವರಿ ತಿಂಗಳವರೆಗೆ ರಸ್ತೆ ದುರಸ್ತಿಗೆ ಆಗಿರುವ ಖರ್ಚು ಎಷ್ಟು ಎಂದು ಪ್ರಶ್ನೆ ಕೇಳಿದ್ದಕ್ಕೆ 1990-91ನೇ ಸಾಲಿನಿಂದ 1991-92ನೇ ಸಾಲಿನ ಫೆಬ್ರುವರಿವರೆಗೆ ಈ ರಸ್ತೆಗಳ ದುರಸ್ತಿಗೆ ಆಗಿರುವ ವೆಚ್ಚ 21 ಲಕ್ಷದ 23 ಸಾವಿರ ರೂಪಾಯಿಗಳೆಂದು ತೋರಿಸಿದ್ದಾರೆ. ಖರ್ಚು ಮಾತ್ರ ತೋರಿಸಿದ್ದಾರೆ, ಕೆಲಸ ಮಾತ್ರ ಶೂನ್ಯ. ಇದೇ ಪ್ರಶ್ನೆಯನ್ನು ನಾನು ಮೊದಲು ಕೇಳಿದರೆ ದಿನಾಂಕ 19-8-91 ರಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1969 ಕ್ಕೆ ಉತ್ತರವಾಗಿ 10 ಲಕ್ಷದ 18 ಸಾವಿರ ರೂಪಾಯಿಗಳ ಖರ್ಚು ತೋರಿಸಿದ್ದಾರೆ, ಆದರೆ ಖರ್ಚು ಮಾತ್ರ ತೋರಿಸಿದ್ದಾರೆ, ಅಲ್ಲಿ ಕೆಲಸ ಮಾತ್ರ ಶೂನ್ಯ ಎಂದು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಎರಡು ಮೂರು ಸಾರಿ ತಂದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಏಕೆ ? ಈಗ ಪುನ: ಕೇವಲ 5 ತಿಂಗಳುಗಳಲ್ಲಿ ಅಂದರೆ ಆಗಸ್ಟ್ 91ರಿಂದ ಜನವರಿ1992ರವರೆಗೆ ಸುಮಾರು 12 ಲಕ್ಷ ರೂಗಳಿಗಿಂತ ಹೆಚ್ಚು ಹಣದ ಖರ್ಚು ತೋರಿಸಿರುವುದರಿಂದ, ಲಕ್ಷಾಂತರ ರೂಪಾಯಿ ಹಣ ಅವ್ಯವಹಾರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಹಾಗೆ ಆಗಲಿಲ್ಲವೆ?

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ಈ ರಸ್ತೆಗಳನ್ನು ಕೂಡ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಅಥಾರಿಟಿ ಮುಖಾಂತರ ತೆಗೆದುಕೊಳ್ಳುವುದಕ್ಕೆ 3 ಕೋಟಿ 90 ಲಕ್ಷ ರೂಪಾಯಿಗಳಾಗುತ್ತದೆ. ಈ ರಸ್ತೆಗಳಿಗಾಗಿ ಈಗ 21 ಲಕ್ಷ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದಾರೆ ಇದು ಏತಕ್ಕೂ ಸಾಲುವುದಿಲ್ಲ. ಆದರಿಂದ ರಸ್ತೆಗಳನ್ನು ಪೂರ್ಣವಾಗಿ ರಿಪೇರಿ ಮಾಡುತ್ತೇವೆಂದರೆ ಸಾಧ್ಯವಾಗುವುದಿಲ್ಲ. ಅಲ್ಲಿ ಟ್ರಾಫಿಕ್ ಬಹಳ ಜಾಸ್ತಿ ಇದೆ. ಭಾರಿ ದೊಡ್ಡ ವಾಹನಗಳು ಅಲ್ಲಿ ಹೋಗುತ್ತಿರುತ್ತವೆ. ಸಿಮೆಂಟ್, ಕಲ್ಲುಬಂಡೆ ಮುಂತಾದುವು ಅಲ್ಲಿಯೇ ಪಾಸ್ ಆಗಬೇಕಾಗಿರುವುದರಿಂದ ಆ ರಸ್ತೆಗಳು ಕೆಟ್ಟು ಹೋಗಿವೆ. ಆ ರಸ್ತೆಗಳನ್ನು ರಿಪೇರಿ ಮಾಡಬೇಕಾದರೆ 3 ಕೋಟಿ 90 ಲಕ್ಷ ರೂಪಾಯಿ ಬೇಕಾಗಿರುತ್ತದೆ. 1990-91ಮತ್ತು 1991-92ನೇ ಸಾಲಿನಲ್ಲಿ ಸುಮಾರು21 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಲ್ಲಿ ಬೇರೆ ಕಾಮಗಾರಿಗಳು ಸಹ ನಡೆಯುತ್ತಿವೆ. ಅಲ್ಲಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಅಥಾರಿಟಿ ಮುಖಾಂತರ ಕೆಲಸಗಳು ನಡೆಯುತ್ತಿವೆ. ಅಲ್ಲಿ ಈಗಾಗಲೇ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಇನ್ನು ಒಂದು ವರ್ಷದಲ್ಲಿ ಆ ರಸ್ತೆಗಳನ್ನು ಪೂರ್ಣ ರಿಪೇರಿ ಮಾಡಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ, ಮಾಡಿಸುತ್ತೇವೆ ಎಂದು ಸನ್ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಅವರು ಪ್ರತಿ ಸಾರಿ ಯಾವುದೇ ಪ್ರಶ್ನೆಯನ್ನು ಕೇಳಿದರೂ ಅಲ್ಲಿ ಅವ್ಯವಹಾರ ನಡೆಯುತ್ತಿದೆ, ಅಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ? ಆ ರಸ್ತೆಯ ಮೇಲಿರತಕ್ಕ ಮೇಸ್ತ್ರಿ ಯಾರು ? ಆ ಟೈಮ್‌ನಲ್ಲಿ ಯಾರಿದ್ದರು ಇದನ್ನೆಲ್ಲ ಅವರು ಕೇಳುತ್ತಾರೆ. ಅದ್ದರಿಂದ ನಾನು ಅದರ ಬಗ್ಗೆ ಮುಖ್ಯ ಇಂಜಿನಿಯರ್‌ರವರಿಗೆ ವಿವರ ಕಳುಹಿಸಲು ಅವರಿಗೆ ಬರೆದಿದ್ದೇನೆ. ಅವರು ಆ ಡೀಟೈಲ್ಸ್ ಕಳುಹಿಸಿದ ನಂತರ ಅವರಿಗೆ ಒದಗಿಸಿ ಕೊಡುತ್ತೇನೆ.

ತಡೆಹಿಡಿಯಲಾದ ಪ್ರಶ್ನೋತ್ತರಗಳು

ಅಧ್ಯಕ್ಷರು : ಮಾನ್ಯ ಶ್ರೀ ಹೆಚ್.ವಿಶ್ವನಾಥ್, ಸದಸ್ಯರು ಗೈರುಹಾಜರಿದ್ದಾರೆ. ಮಾನ್ಯ ಇದಿನಬ್ಬರವರು; ಪ್ರತಾಪಚಂದ್ರ ಶೆಟ್ಟಿಯವರು ಕೆ.ಸಿದ್ದಯ್ಯನವರು, ಸದಸ್ಯರುಗಳು ಗೈರು ಹಾಜರಿ ಇದ್ದಾರೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆಯಿದೆ.

ಅಧ್ಯಕ್ಷರು: ನಾನು ನಿಮ್ಮನ್ನು ಕರೆದಾಗ ನೀವು ಸಭೆಯಲ್ಲಿರಲಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕಬಿನಿ ಎರಡನೇ ಹಂತದ ಯೋಜನೆ.

(2323) ಶ್ರೀ ಎಂ.ಮಹದೇವ್ (ನಂಜನಗೂಡು):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಕಬಿನಿ ಎರಡನೇ ಹಂತದ ಯೋಜನೆಯನ್ನು ಸರ್ಕಾರ ಯಾವಾಗ ಪ್ರಾರಂಭಿಸುತ್ತದೆ ?

ಆ ಕಾವೇರಿ ಜಲಾನಯನ ಅಭಿವೃದ್ಧಿಗೆ ನಿಗದಿ ಪಡಿಸಿದ್ದ ಮೊತ್ತದಲ್ಲಿ ಕಬಿನಿ ಜಲಾನಯನ ಎರಡನೇ ಹಂತ ಪೂರೈಸಲು ಎಷ್ಟು ಹಣವನ್ನು ನೀಡಲಾಗಿದೆ ?

ಇ ಕಬಿನಿ ಎರಡನೇ ಹಂತದ ಯೋಜನೆಯಿಂದ ಯಾವ ಯಾವ ತಾಲ್ಲೂಕಿಗೆ ಅನುಕೂಲವಾಗುತ್ತದೆ ಹಾಗೂ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರೆಯುತ್ತದೆ ?

ಈ ಎರಡನೇ ಹಂತದ ಜಲಾನಯನದ ಕಾಮಗಾರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು , ಹಾಗೂ ಕಾರ್ಯಗತಗೊಳಿಸುವಲ್ಲಿ ವಿಳಂಬವಾಗಲು ಕಾರಣಗಳೇನು ?